<u>**ದಿನಾಂಕಃ 06–11–2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**</u>

<u>**ಮುಂದುವರಿದ ಪಾಟೀಸವಾಲು ಶ್ರೀ ಎನ್ ಎಸ್ ವಕೀಲರಿಂದ**</u>ಃ

ಸಾಕ್ಷಿಗೆ ಈಗ ಎಫ್.ಡಿ.ಪಿ.1/2014 ರ ಆದೇಶ ಪುಟ, ಅರ್ಜಿ, ತಕರಾರು, ಕಮೀಷನರ್ ರವರ ವರದಿಯ ಮಂಜುರಾತಿ ನಕಲುಗಳನ್ನು ನೋಡಿ ಒಪ್ಪಿಕೊಳ್ಳುತ್ತಾರೆ. ಅವುಗಳನ್ನು ನಿಡಿ–2 ರಿಂದ 5 ಎಂದು ಗುರುತಿಸಲಾಯಿತು. ನಿಪಿ–1 ರ ಅರ್ಜಿದಾರರು ತಿಪಟೂರು ತಾಲ್ಲೂಕಿನ ಜಕ್ಕನಹಳ್ಳಿ ಹಾಗೂ ಚಿಕ್ಕಾನಾಯಕನಹಳ್ಳಿಯ ದಿಬ್ಬದಹಳ್ಳಿ ಗ್ರಾಮದ ವಾಸಿಯಾಗಿದ್ದು ಈ ಎರಡು ಗ್ರಾಮಗಳು ತಿಪಟೂರು 5 ನೇ ಹೆಚ್ಚುವರಿ ಮತ್ತು ಸತ್ರ ನ್ಯಾಯಾಲಯದ ವ್ಯಾಪ್ತಿಗೆ ಬರುತ್ತವೆ ಅಂದರೆ ನಿಜ. ನಿಪಿ–1 ರ ಆದೇಶ ಪಡೆಯಲು ದಿನಾಂಕ 12.08.2022 ರಂದು ಅರ್ಜಿ ಸಲ್ಲಿಸಿದ್ದೇವು ಅಂದರೆ ನಿಜ. ಆ ಅರ್ಜಿ ಸಲ್ಲಿಸಿದ ನಂತರ

20.08.2022 ರಂದು ಈ ದಾವೆ ಸಲ್ಲಿಸಿರುತ್ತೇವೆ ಅಂದರೆ ನಿಜ. ಈ ದಾವೆಯಲ್ಲಿ ನಿಪಿ-1 ರ ವಿಚಾರವನ್ನು ಹೇಳಿರುವುದಿಲ್ಲ ಅಂದರೆ ನಿಜ. ಪ್ರತಿವಾದಿಯ ಶಾಲಾ ದಾಖಲೆಯನ್ನು ಪ್ರಶ್ನಿಸಿ ಸಂಬಂಧಿಸಿದಂತೆ ಶಿಕ್ಷಣಾ ಅಧಿಕಾರಿಯ ಮುಂದೆ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಅವರ ಶಾಲಾ ದಾಖಲೆಗೆ ಸಂಬಂಧಿಸಿದಂತೆ ಶಿಕ್ಷಾಣಾಧಿಕಾರಿಗಾಗಲಿ ಅಥವಾ ಮೇಲಾಧಿಕಾರಿಗಾಗಲಿ ಯಾವುದೇ ನೋಟೀಸು ಕೊಟ್ಟಿರುವುದಿಲ್ಲ ಅಂದರೆ ನಿಜ. ದಾಖಲೆಗೆ ಸಂಬಂದಧಿಸಿದಂತೆ ಬ.ಇ.ಓ. ಡಿ.ಡಿ.ಪಿ.ಯಿ ಆಗಲಿ ಅಥವಾ ಸರ್ಕಾರವನ್ನಾಗಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಅಂದರೆ ನಿಜ. ಪ್ರತಿವಾದಿ ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ ಅಂದರೆ ನಿಜ. ನಿಪಿ-1 ರ ಆದೇಶವನ್ನು ಪ್ರಶ್ನಿಸಿ ಪ್ರತಿವಾದಿಯು ತುಮಕೂರು ನಿಪಿ-1 ಆದೇಶ ಮಾಡಿರುವ ನ್ಯಾಯಾಲಯದಲ್ಲಿ ಸಿವಿಲ್ ಮಿಸ್ಃ 121/2024 ಸಲ್ಲಿಸಿದ್ದಾರೆ ಅಂದರೆ ನಿಜ. ಸದರಿ ಆದೇಶ ಪುಟ, ಅರ್ಜಿ, ಮಧ್ಯಂತರ ಅರ್ಜಿ ಕಲಂ 150 ರ ಅಡಿಯಲ್ಲಿನ ಅರ್ಜಿಯ ಮಂಜುರಾತಿ ನಕಲನ್ನು ನೋಡಿ ಸಾಕ್ಷಿ ಒಪ್ಪಿಕೊಳ್ಳುತ್ತಾರೆ. ಅವುಗಳನ್ನು ನಿಡಿ-6 ಎಂದು 8 ಎಂದು ಗುರುತಿಸಲಾಯಿತು. ನಿಪಿ-1 ರ ಆದೇಶ ಪಡೆಯುವ ಮೊದಲು ಅದರಲ್ಲಿರುವ ಆಸ್ತಿಗಳು ಪ್ರತಿವಾದಿ ಹೆಸರಿಗೆ ಬದಲಾವಣೆಯಾಗಿದ್ದವು ಅಂದರೆ ಸರಿಯಲ್ಲ. ನಿಪಿ- 1 ರ ಪ್ರಕರಣದಲ್ಲಿ ಪ್ರತಿವಾದಿಗೆ ನೋಟೀಸು ಕೊಟ್ಟಿರುವುದಿಲ್ಲ ಮತ್ತು ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ ಅಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಗಳು ಪ್ರತಿವಾದಿಯ ತಾಯಿ ಮರಣ ನಂತರ ಪೌವತಿ ವಾರಸು ಪ್ರತಿವಾದಿಯ ಹೆಸರಿಗೆ ಆಗಿವೆ ಅಂದರೆ ನಿಜ. ಆ ಕಾರಣಕ್ಕೆ ಈ ವ್ಯಾಜ್ಯ ಮಾಡಿರುತ್ತೇವೆ. ಈ ಪೌವತಿ ವಾರಸು ಬದಲಾವಣೆಯಾದ ಬಗ್ಗೆ ಎ.ಸಿ ಕಚೇರಿಯಲ್ಲಿ ಮೇಲ್ಮನವಿ ಸಲ್ಲಿಸಿರುತ್ತೇವೆ. ಈ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿರುವುದಿಲ್ಲ. ವಿಲ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಅಂದರೆ ಸರಿಯಲ್ಲ. ನಿಡಿ-1 ಮತ್ತು 2 ರ ವ್ಯಾಜ್ಯದ ಆದೇಶ ಪ್ರಶ್ನಿಸಿ ಯಾವುದೇ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಹೆಚ್.ಬಿ.ಗವಿರಂಗಪ್ಪ ತಂದೆ ರಾಮಲಿಂಗಯ್ಯ ಮತ್ತು ಕಳಸಯ್ಯ ತಂದೆ ಲಕ್ಕಣ್ಣ ನಮ್ಮ

ತೋಟದ ಪಕ್ಕದವರಿರುತ್ತಾರೆ. ಅವರು ನನ್ನ ತಂದೆ ಸಮಕಾಲೀನರು ಮತ್ತು ಆತ್ಮೀಯರು ಅಂದರೆ ನಿಜ. ಇವರಿಬ್ಬರು ಮತ್ತು ನಮ್ಮ ತಂದೆ ಯಾವುದೇ ಕೆಲಸ ಮಾಡಬೇಕಾದಲ್ಲಿ ಪೂರ್ವ ನಿರ್ದಾರ ಮಾಡಿಕೊಂಡು ಕೆಲಸ ಮಾಡುತ್ತಾರೆ ಅಂದರೆ ನಿಜ. ದಾವಾ ಆಸ್ತಿಯ ಸರ್ವೆ ನಂಃ 18/1 ರ ಪೂರ್ವಕ್ಕೆ ಕೆಂಚಪ್ಪ ನವರ ಆಸ್ತಿ, ಪಶ್ಚಿಮಕ್ಕೆ ಶಿವಣ್ಣರವರ ಆಸ್ತಿ, ಉತ್ತರಕ್ಕೆ ಗೋವಿಂದಪ್ಪ ರವರ ಆಸ್ತಿ, ದಕ್ಷಿಣಕ್ಕೆ ಕೆಂಪನಂಜಮ್ಮ ನವರ ಆಸ್ತಿ ಇದೆ. ದಾವಾ ಆಸ್ತಿಯ ಸರ್ವೆ ನಂಃ 4/2 ರ ಪೂರ್ವಕ್ಕೆ ಲತಮ್ಮ ರವರ ಆಸ್ತಿ, ಪಶ್ಚಿಮಕ್ಕೆ ಗೋವಿಂದಪ್ಪ ರವರ ಆಸ್ತಿ, ಉತ್ತರಕ್ಕೆ ಕೆಮ್ಮನಂಜಮ್ಮ ರವರ ಆಸ್ತಿ, ದಕ್ಷಿಣಕ್ಕೆ ಶಿವಣ್ಣ ನವರ ಆಸ್ತಿ ಇದೆ. ದಾವಾ ಆಸ್ತಿಯ ಸರ್ವೆ ನಂಃ 14/7 ರ ಆಸ್ತಿಯ ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ಅದರ ವಿಸ್ತೀರ್ಣ 12 ಗುಂಟೆ ಇದೆ. ದಾವಾ ಆಸ್ತಿಯ ಸರ್ವೆ ನಂಃ 14/6 ರ ಆಸ್ತಿಯ ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ಅದರ ವಿಸ್ತೀರ್ಣ 19 ಗುಂಟೆ ಇದೆ. ದಾವಾ ಆಸ್ತಿಯ ಸರ್ವೆ ನಂಃ 15/5 ರ ಆಸ್ತಿಯ ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ಅದರ ವಿಸ್ತೀರ್ಣ 9 ಗುಂಟೆ ಇದೆ. ದಾವಾ ಆಸ್ತಿಯ ಸರ್ವೆ ನಂಃ 15/2 ರ ಆಸ್ತಿಯ ಚೆಕ್ಕುಬಂದಿ ನನಗೆ ಗೊತ್ತಿರುವುದಿಲ್ಲ. ಅದರ ವಿಸ್ತೀರ್ಣ 13 ಗುಂಟೆ ಇದೆ. ದಾವಾ ಆಸ್ತಿಗಳು ನಿಡಿ-1 ರ ದಾವೆಯಲ್ಲಿ ಸೇರಿದ್ದವು ಅಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ ಪುಟ್ಟಲಕ್ಷ್ಮಮ್ಮ ಅಲಿಯಾಸ್ ಲಕ್ಷ್ಮಿದೇವಮ್ಮ ರವರ ಸ್ವಂತ ಮಗಳು ಅಂದರೆ ಸರಿಯಲ್ಲ. ಪುಟ್ಟಲಕ್ಷ್ಮಮ್ಮ ಅಲಿಯಾಸ್ ಲಕ್ಷ್ಮಿದೇವಮ್ಮ ಮತ್ತು ಮಲ್ಲಯ್ಯ ರವರ ದಂಪತಿಗಳ ಮಗಳು ಪ್ರತಿವಾದಿಯಾಗಿದ್ದು ಅವರ ಎಲ್ಲಾ ಶಾಲಾ ದಾಖಲೆಯಲ್ಲಿ ತಂದೆ ತಾಯಿ ಹೆಸರು ಬಂದಿರುತ್ತದೆ ಅಂದರೆ ಸರಿಯಲ್ಲ. ಈ ಬಗ್ಗೆ ನಿಪಿ-1 ಮತ್ತು 2 ರ ವ್ಯವಹರಣೆಯಲ್ಲಿ ತೀರ್ಮಾನ ಆಗಿರುತ್ತದೆ ಅಂದರೆ ಸರಿಯಲ್ಲ. ನಮಗೆ ಪುಟ್ಟಲಕ್ಷ್ಮಮ್ಮ ಅಲಿಯಾಸ್ ಲಕ್ಷ್ಮಿದೇವಮ್ಮ ಯಾವುದೇ ದಾಖಲೆ ಬರೆದುಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ಈ ವಿಷಯ ತಿಳಿಯುತ್ತಲೇ ಬುದ್ದಿಪೂರ್ವಕವಾಗಿ ಮೋಸದಿಂದ ವ್ಯಾಪ್ತಿ ಪ್ರದೇಶದ ಹೊರಗಿನ ನ್ಯಾಯಾಲಯದಲ್ಲಿ ನಿಪಿ-1 ಆದೇಶ ಪಡೆದಿರುತ್ತೇವೆ ಅಂದರೆ ಸರಿಯುಲ್ಲ. ದಾವಾ ಆಸ್ತಿಗಳು

ಪ್ರತಿವಾದಿಯ ಹಕ್ಕು ಅನುಭವದಲ್ಲಿರುವ ಆಸ್ತಿಗಳು ಅಂದರೆ ಸರಿಯಲ್ಲ. ಪ್ರತಿವಾದಿಯ ಹಕ್ಕು ಮತ್ತು ಸ್ವಾಧೀನ ಇರುವ ಆಸ್ತಿಯನ್ನು ಎತ್ತಿಹಾಕಬೇಕು ಎನ್ನುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ವಾದಿಯರ ಪರವಾಗಿ ಈ ದಾವೆ ನಡಸೆಲು ನನಗೆ ಯಾವುದೇ ಅಧಿಕಾರ ಇಲ್ಲ ಅಂದರೆ ಸರಿಯಲ್ಲ. ವಾದಿ ಜ್ಯೋತಿ ನ್ಯಾಯಾಲಯಕ್ಕೆ ಬಂದರೆ ಸತ್ಯಾಂತ ಗೊತ್ತಾಗುತ್ತದೆ ಎಂದು ನಾನು ಬಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ,
ಚಿಕ್ಕನಾಯಕನಹಳ್ಳಿ.